ಹೂವಾಡಿಗಿತ್ತಿ

ರಾಘವ



ಮೈಸೂರು
ಕಾವ್ಯಾಲಯ : : ಪ್ರಕಾಶಕರು

ಮಕ್ಕಳ ಮುತ್ತಿನಮಾಲೆ

ಹೂವಾಡಿಗಿತ್ತಿ

ರಾಘವ

ಚಿತ್ರಗಳು : ಆರ್. ಕೆ. ಲಕ್ಷ್ಮಣ್



ಮೈಸೂರು

ಕಾವ್ಯಾಲಯ :: ಪ್ರಕಾಶಕರು

HOOVADIGITTI (Twenty-seven poen
Kannada for Children) by 'Raghava'. Kavy
Publishers, Mysore 4. First Published in
Reissued (with additional poems) 1958,
Price 75 paise.

ಮುದ್ರಕರು
ಶ್ರೀ ಸೀತಾರಾಘವ ಪ್ರೆಸ್
ರಾಮಸ್ವಾಮಿ ಸರ್ಕಲ್, ಮೈಸೂರು

ಇನ್ನಿಲ್ಲದ
ನನ್ನ
ಮುದ್ದು ವೆಂಕಟೇಶನ
ನೆನಪಿಗೆ
ಈ ಹೂಹಾರ
ಮುಡಿಪು

ಮಕ್ಕಳಿಗೊಂದು ಮಾತು

ಹೂವಾಡಿಗಿತ್ತಿ ನಿಮಗೆಲ್ಲ ಬೇಕಾದವಳಾಗಿದ್ದಾಳೆ ಎಂದು ನನಗೆ ನಂಬಿಕೆ ಇದೆ. ನಾನು ಬೆಳೆದ ಹೂಗಳಲ್ಲಿ ನಿಮಗೆ ಬೇಕಾದುವನ್ನು ಆಯ್ದು ಹಾರ ಕಟ್ಟಿ 'ಹೂವಾಡಿಗಿತ್ತಿ'ಯ ಕೈಲಿ ನಿಮಗೆ ಕಳಿಸಿ ಕೊಟ್ಟಿದ್ದೇನೆ. ಅದರಲ್ಲಿ ಸುವಾಸನೆ ಇರುವ ಹೂವು, ಸುವಾಸನೆ ಇಲ್ಲದ ಹೂವು, ಬಣ್ಣಬಣ್ಣದ ಹೂವು, ಬಣ್ಣವಿಲ್ಲದ ಹೂವು, ಎಲ್ಲ ಸೇರಿವೆ. ಒಟ್ಟಿನಲ್ಲಿ ಹಾರ ಚೆನ್ನಾಗಿದೆಯೆಂದು ನೀವು ನಲಿದರೆ ನಾನೂ ನಲಿಯುವೆ. ಈಗ ನನ್ನಲ್ಲಿ ಇದ್ದಷ್ಟು ಮಾತ್ರ ಕನ್ನಡ ತಾಯ ಮಕ್ಕಳಾದ ನಿಮಗೆ ಕಾಣಿಕೆ ಸಲಿಸಿದೇನೆ. ಇನ್ನು ಮುಂದೆ ಇನ್ನೂ ಹೆಚ್ಚಿನ ಮೆಚ್ಚಿನ ಕಾಣಿಕೆ ನಿಮಗೆ ತಂದು ಒಪ್ಪಿಸಲು ಪ್ರಯತ್ನ ಪಡುತ್ತೇನೆ.

೧೨-೧೦-೧೯೪೫. **ರಾಘವ.**

ಎರಡನೆಯ ಮುದ್ರಣ (೧೯೫೮)

ಈ ಮುದ್ರಣದಲ್ಲಿ ಹನ್ನೊಂದು ಹೊಸ ಕವನಗಳನ್ನು ಸೇರಿಸ ಲಾಗಿದೆ.

ಶ್ರೀ ರಾಘವರ

ಇನ್ನೊಂದು ಮಕ್ಕಳ ಪದ್ಯಸಂಗ್ರಹ

ಹಾ ವಾ ಡಿ ಗ

ವಿಷಯಸೂಚಿಕೆ

ಹೂವಾಡಿಗಿತ್ತಿ

ಹೂವನು ಮಾರುತ
ಹೂವಾಡಿಗಿತ್ತಿ
ಹಾಡುತ ಬರುತಿಹಳು ;
ಘಮ ಘಮ ಹೂಗಳು
ಬೇಕೇ ಎನುತ
ಹಾಡುತ ಬರುತಿಹಳು.
ಬಿಳುಪಿನ ಮಲ್ಲಿಗೆ
ಹಳದಿಯ ಸಂಪಿಗೆ
ಹಸುರಿನ ಹೊಸ ಮರುಗ
ಹಾಕಿ ಕಟ್ಟಿರುವೆ
ಬೇಕೇ ಎನುತ
ಹಾಡುತ ಬರುತಿಹಳು.
ಹೊಸ ಸೇವಂತಿಗೆ
ಹೊಸ ಇರುವಂತಿಗೆ
ಅರಿಸಿನ ತಾಳೆಯಿದೆ
ಅಚ್ಚ ಮಲ್ಲೆಯಲಿ
ಪಚ್ಚೆ ತೆನೆಗಳು
ಸೇರಿದ ಮಾಲೆಯಿದೆ.
ಕಂಪನು ಚೆಲ್ಲುವ
ಕೆಂಪು ಗುಲಾಬಿ
ಅರಳಿದ ಹೊಸ ಕಮಲ ;

ಬಿಳುಪಿನ ಜಾಜಿ,
ಹಳದಿಯು ಜಾಜಿ,
ಅರಳಿದ ಬಿಳಿ ಕಮಲ.
ಬಗೆ ಬಗೆ ಹೂಗಳು
ಬೇಕೇ ಎನುತ
ಹಾಡುತ ಬರುತಿಹಳು ;
ಹೂವನು ಮಾರುವ
ಹೂವಾಡಿಗಿತ್ತಿ
ಹಾಡುತ ಬರುತಿಹಳು.

ಮೊಸರ್ಬೇಕ್ ಮೊಸರು !

ಮೊಸರ್ಬೇಕ್ ಮೊಸರು! ಮೊಸರ್ಬೇಕ್ ಮೊಸರು!
ನನ್ನಲ್ಲಿ ಕೊಂಡರೆ ಕೊಡುತೀನಿ ಕೊಸರು!
ನನ್ನದು ಶ್ರೀರಂಗಪಟ್ಟಣದ ಮೊಸರು,
ಎಲ್ಲರಿಗು ಗೊತ್ತು, ಈ ಮೊಸರಿನ ಹೆಸರು
ನಾಕೆಮ್ಮೆ ಕಟ್ಟಿವಿನಿ : ಒಳ್ಳೆಯ ಹಸುರು
ಹುಲ್ಲನು ಮೇಯ್ತಾವೆ : ಅವುಗಳ ಮೊಸರು
ಚೌಕಾಸಿ ಮಾಡ್ಬೇಡಿ : ಒಳ್ಳೆಯ ಮೊಸರು-
ನೀರಾಗಿದ್ರೆ, ಕೆಂಪಿ ಅಲ್ಲ ನನ್‌ಹೆಸರು
ಮೋಸ ಗೀಸ ಇಲ್ದೆ ಹಾಕ್ತೀನಿ ಮೊಸರು,
ಮೋಸ ಕಂಡರೆ ನನ್ನ ತಲೆಗಿಕ್ಕಿ ಕೆಸರು.
ನಿಂ ಹೊಟ್ಟೆ ತಣ್ಗಿರಲಿ, ಕೊಳ್ಳಿ ನನ್‌ಮೊಸರು :

ನಿಂ ದುಡ್ಡು ಕೊಂಡು ಹೇಳ್ತೀನಿ ನಿಂ ಹೆಸರು.
ಮೊಸರ್ಬೇಕ್ ಮೊಸರು ! ಮೊಸರ್ಬೇಕ್ ಮೊಸರು !
ಶ್ರೀರಂಗಪಟ್ಟಣದ ಒಳ್ಳೆ ಗೆರಣೆ ಮೊಸರು !!

——

ಇರುವೆ

ಇರುವೆ ! ಇರುವೆ ! ಇರುವೆ ! ಇರುವೆ !
ಎಲ್ಲೆಲ್ಲೂ ಇರುವೆ !
ಎಲ್ಲಿ ನೋಡಿದರು ನೀನಿರುವೆ !
ಸಕ್ಕರೆ ಡಬ್ಬವ ತೆಗೆದರೆ ಇರುವೆ !
ಅಕ್ಕಿಯ ಮೂಟೆಯಲಲ್ಲೂ ಇರುವೆ !
ಬೆಲ್ಲದ ಅಚ್ಚನು ಮುತ್ತಿರುವೆ !
ಕಲ್ಲು ಸಕ್ಕರೆಯ ಸುತ್ತಿರುವೆ !
ಎಲ್ಲಿ ನೋಡಿದರು ನೀನಿರುವೆ !
ತುಪ್ಪದ ಗಡಿಗೆಯ ಮನೆಮಾಡಿರುವೆ !
ಹಪ್ಪಳ ಸಂಡಿಗೆಯನು ಕೊರೆದಿರುವೆ !
ಹಾಲಿನ ಒಳಗೂ ನೀನಿರುವೆ !
ಕಾಫಿಯ ಒಳಗೂ ನೀನಿರುವೆ !
ಎಲ್ಲಿ ನೋಡಿದರು ನೀನಿರುವೆ !
ಇರುವೆ ! ಇರುವೆ ! ಇರುವೆ ! ಇರುವೆ !
ಎಲ್ಲೆಲ್ಲೂ ಇರುವೆ !
ಎಲ್ಲಿ ನೋಡಿದರು ನೀನಿರುವೆ !

——

ಜಾಣ ಯಾರು ?

ಹೂಗಳಲೆಲ್ಲ ಗುಲಾಬಿಯೆ ಚೆಂದ ;
ಆದರು ಮಲ್ಲಿಗೆ ಹೂವಿನ ಸುಗಂಧ
ಮನಸನು ಸೆಳೆಯುವುದು.

ನವಿಲನು ನೋಡಲು ಸಾಲವು ಕಣ್ಣು
ಕಾಣದ ಕೋಗಿಲೆ ಹಾಡದು ಚೆನ್ನು,
ಬೇಸರ ಕಳೆಯುವುದು.

ಒಂದೊಂದರಲ್ಲಿ ಒಂದೊಂದು ಗುಣ
ಉಂಟೆಂಬುದನರಿಯುವನೇ ಜಾಣ.

ಮಳೆ

ಆಗಸದಲ್ಲಿ ಮೋಡ ಕಟ್ಟುವುದು
ಗುಡುಗುಡು ಗುಡುಗು ಗುಡುಗುಟ್ಟುವುದು
ಥಳಿಲನೆ ಹೊಳೆವುದು ಮಿಂಚಿನ ಬಳ್ಳಿ
ಭೋರ್ಗರೆವುದು ಮಳೆ ಕ್ಷಣದಲ್ಲಿ !
ನೆಲವೆಲ್ಲಾ ಬರಿ ಕೆಸರಾಗುವುದು,
ಆದರೆ ಗಿಡಮರ ಹಸುರಾಗುವುದು ;
ಬಿಸಿಲಿನ ತಾಪ ಹಿಂದೋಡುವುದು,
ತಂಗಾಳಿಯು ತಾನಾಡುವುದು.

ಬಾತು ಕೋಳಿ ಕುಣಿತ



ಬಾತು ಕೋಳಿ ಪೀಪಿ ಹಿಡಿದು
   ಪೀ ಎಂದಿತು—ಪೀ ಪೀ ಎಂದಿತು ;
ಬಾತುಮರಿ ಕುಣಿದು ಕುಣಿದು
   ತ್ರೈ ಎಂದಿತು—ತ್ರೈ ತ್ರೈ ಎಂದಿತು.
ಪೀ ಪಿ ಪಿ ಪೀ ಪೀ ಪಿ ಪೀ ಪಿ
   ಪೀ—ಪೀ—ಪೀ
ತ್ರೈ ತ್ರಕ್ಕ ತ್ರೈ ತ್ರಕ್ಕ
   ತ್ರೈ—ತ್ರೈ—ತ್ರೈ.
ಪೀಪಿ ಕೇಳಿ ಬಾತು ಹಿಂಡು
   ಓಡಿ ಬಂದುವು—ಬಂದು ಪೀ ಎಂದುವು ;
ಎಲ್ಲ ಒಟ್ಟಿಕೂಡಿಕೊಂಡು
   ತ್ರೈ ಎಂದವು—ತ್ರೈ ತ್ರೈ ಎಂದುವು.

ಪಿ ಪೀ ಪೀ ಪಿ ಪಿ ಪೀ ಪೀ ಪಿ
ಪೀ—ಪೀ—ಪೀ
ತಕ್ಕ ತ್ರೈ ತಕತ ತ್ರೈ
ತ್ರೈ ತಕ್ಕ ತ್ರೈ.

——

ತುಂಟರು

ಕಿಟ್ಟು ಪುಟ್ಟು ಒಟ್ಟಿಗೆ ಸರ್ರ್ರನೆ
ಬೀದಿಯ ಬಚ್ಚಲ ಹಾರಿದರು ;
ಒಬ್ಬನು ಎಡವಲು ಇಬ್ಬರು ಜರ್ರ್ರನೆ
ಬಚ್ಚಲ ಕೊಚ್ಚೆಗೆ ಜಾರಿದರು.
ಅವರಿಗೆ ಮೈ ಕೈ ಕೆಸರಾಯ್ತು !
ತುಂಟರು ಎಂದು ಹೆಸರಾಯ್ತು !

——

ಕಳ್ಳ ಸಿದ್ದ

ಅಡಿಗೆ ಮನೆಗೆ ಹೋಗಿ ಸಿದ್ದ
ಕರಿಯ ಬೆಲ್ಲದಚ್ಚು ಕದ್ದ.
ಅಚ್ಚಿನಲ್ಲಿ ಬರಿಯ ಗೊದ್ದ !
ಕಾಣಲಿಲ್ಲ ಸಿದ್ದ, ಪೆದ್ದ—
ಹಾಗೆ ಹಾಗೆಯೇ ಮೆದ್ದ.
ಬಾಯ ಕಚ್ಚಲಾಗ ಗೊದ್ದ
ಅಳುತ ಅಳುತ ಅಲ್ಲೆ ಇದ್ದ ;
ಅಮ್ಮ ಬರಲು, ಸಿಕ್ಕಿಬಿದ್ದ !

ಪಟಿಂಗ ರಂಗ

ಗಣಗಣ ಹೊಡೆಯಿತು ಶಾಲೆಯ ಗಂಟೆ,
ಶಾಲೆಗೆ ಹೋಗಲು ರಂಗನ ತಂಟೆ.
ಚೊಯ್ಯೆಂದಿತು ಬಿಸಿ ಬಿಸಿ ಬಿಸಿ ದೋಸೆ
ಮರೆತನು ರಂಗನು ಪಾಠದ ಆಸೆ.
ಶಾಲೆಗೆ ಹೋದರೆ ಮೇಷ್ಟರ ಕಾಟ,
ಮನೆಯಲಿ ಉಳಿದರೆ ಆಟವೆ ಆಟ.—
ಹೀಗೆಯೆ ರಂಗ
ಆದ ಪಟಿಂಗ.
ಪಟಿಂಗನೆಂದರೆ ಶುದ್ಧ ಒರಟ,
ತಿರುಳಿಲ್ಲದ ತೆಂಗಿನ ಕಾಯ್‌ಕರಟ!

ನಂ ಚಿಕ್ಕ

ಎಲ್ಲರಿಗಣ್ಣ ನಂ ಚಿಕ್ಕ:
ಲೆಕ್ಕ ಅಂದರೆ ಬಲು ದುಃಖ!
ಕೊಡುವುದೆಲ್ಲ ಕವಡೆ ಕಲ್ಲು
ಕಳೆಯುವುದೆಲ್ಲ ಪುಸ್ತಕ ಬಳಪ
ಗುಣಿಸುವುದೆಲ್ಲ ಗೋಡೆಯ ಚಿತ್ರ
ಭಾಗ್ಸೋದೆಲ್ಲ ಬಾಯಿನ ಒಳಗೆ!
ಜೇಬಿನ ತುಂಬ ರೂ. ಆ. ಪೈ!
ಎಲ್ಲಿತ್ತೆನೆ ಬಾಯ್‌ಬಿಟ್ಟರೆ ಸೈ!

ಬೀದಿಯ ಕಾಣಿತ
ಚಿಕ್ಕನ ಗಣಿತ!
ಮನೆಯಲಿ ಜೋರು ಕೈಯಿ ಬಾಯಿ;
ಪರೀಕ್ಷೆಯಲ್ಲಿ ಕುಂಬಳಕಾಯಿ!
ಎಲ್ಲರಿಗಣ್ಣ ನಂ ಚಿಕ್ಕ:
ಲೆಕ್ಕ ಎಂದರೆ ಬಲು ದುಃಖ!

ಕುರೋ ಕುರೋ ನಾಯಿಮರಿ

ಕುರೋ ಕುರೋ ನಾಯಿಮರಿ
ಓಡಿ ಬಾ ಬಾ!
ಅಮ್ಮ ಕೊಟ್ಟ ರೊಟ್ಟಿಚೂರು
ಅಪ್ಪ ಕೊಟ್ಟ ಬಿಸ್ಕತ್ತು
ಹಾಲು ಅನ್ನದೊಂದು ತುತ್ತು
ಕೊಡುವೆ ಬಾ ಬಾ!
ಕುರೋ ಕುರೋ ನಾಯಿಮರಿ,
ಓಡಿ ಬಾ ಬಾ!
ನಿನ್ನ ನಾನು ಹೊಡೆವುದಿಲ್ಲ,
ನನ್ನ ನೀನು ಕಚ್ಚಬೇಡ;
ಬೀದಿಯವರ ಕಂಡು ನೀನು
ಬಗುಳಬೇಡ, ತಿಳಿಯಿತೆ?

ನಿನ್ನ ನಾನು ಬಿಡೆನು ; ನೀನು
ನನ್ನ ಬಿಟ್ಟು ಓಡಬೇಡ ;
ಎಲ್ಲಿ ಹೋದರಲ್ಲಿ ನಾವು
ಕೂಡಿರೋ ಜೊತೆಯಲಿ.
ಕುರೋ ಕುರೋ ನಾಯಿಮರಿ
ಓಡಿ ಬಾ ಬಾ !
ಇಂದಿನಿಂದ ನನ್ನ ಮರಿ—
ಹೊಟ್ಟೆ ತುಂಬ ತಿಂಡಿ ಕೊಡುವೆ,
ಮುದ್ದಾದ ಹೆಸರನಿಡುವೆ ;
ಕುರೋ ಎಂದು ಕರೆಯೆನು.
ಕುರೋ ಕುರೋ ನಾಯಿಮರಿ
ಓಡಿ ಬಾ ಬಾ !

——

ಯಾರು ಚೆನ್ನು ?

ಗೋಡೆಯ ಮೇಲಿನ ಕನ್ನಡಿಯೆ,
ಹೇಳಲೆ ನಾ ಚೆನ್ನೆ ?
—ಎನ್ನುತ ಶಾರದೆ ಕೇಳಿದಳು.
ಗೋಡೆಯ ಮೇಲಿನ ಕನ್ನಡಿಯೆ,
ಶಾರದೆಗಿಂತಲು ನಾ ಚೆನ್ನೆ ?
—ಎಂದು ಕೇಳಿದಳು ಕಮಲಾಕ್ಷಿ.

ಗೋಡೆಯ ಮೇಲಿನ ಕನ್ನಡಿಯ,
ಇಬ್ಬರಿಗಿಂತಲು ನಾ ಚೆನ್ನು
—ಎಂದು ಹೇಳಿದಳು ಪುಟ್ಟಚ್ಚಿ.

ಕನ್ನಡಿ ನಕ್ಕು
ಆಯಿತು ಮುಕ್ಕು!
ಹೇಳಿತು ಕೊನೆಗೆ
ಅದು ಹೀಗೆ :
'ಶಾರದೆಯಾ ಮುಖ ಬಲು ಚೆನ್ನು—
ಆದರೆ, ಐಬು ಅವಳಿಗೆ ಕಣ್ಣು!
'ತುಂಬಾ ಲಕ್ಷಣ ಕಮಲಾಕ್ಷಿ—
ಆದರೆ, ಬಣ್ಣ ಕಪ್ಪನೆ ದ್ರಾಕ್ಷಿ!
'ಹೊಟ್ಟೆಯ ಕಿಚ್ಚಿನ ಪುಟ್ಟಚ್ಚಿ
ನಾನೇ ಚೆನ್ನು ಎನ್ನುವ ಹುಚ್ಚಿ!
ಹೇಗಿರಲೇನು ?
ಎಲ್ಲಾ ಚೆನ್ನು :
ಒಳ್ಳೆಯ ಮನಸು
ಒಳ್ಳೆಯ ಮಾತು
ಒಳ್ಳೆಯ ನಡತೆ
ಉಳ್ಳವರೆಲ್ಲ
ಚೆನ್ನು, ಚೆನ್ನು.

——

ಬಾನಿನ ಕನ್ನಡಿ

ಸಾರುತ ಬಾರ ತಿಂಗಳ ಚಂದಿರ
ಬಿಗಿಯುತ ಬಾನಲಿ ಜೊನ್ನದ ಹಂದರ
ಸುರಿಸುತ ಹಾಲಿನ ಮಳೆಯನ್ನು,
ಮುಳುಗಿಸುತದರಲಿ ತಿರೆಯನ್ನು.

ಆಡುವ ಬಾಲರು ನಿನ್ನನು ನೋಡಿ
"ಚಂದಕಿ ಮಾಮ" ಎನ್ನುತ ಹಾಡಿ,
ಜೊನ್ನದ ಹಾಲನು ಕುಡಿಕುಡಿದು
ತೇಗುತ ನಲಿವರು ಉಲಿದುಲಿದು.

ನೀ ಮೇಲೇರಲು ಬಾನಲಿ ನಗುತ
ಮಕ್ಕಳು ಕುಣಿವರು ನಿನ್ನನು ನೋಡುತ—
ನೀನಿರೆ ಹೊಳೆಯುತ ಬಾನಿನೊಳು
"ಬಾನಿನ ಕನ್ನಡಿ"ಯೆನ್ನುವರು.

ಬಾನಿನ ಕನ್ನಡಿಯೆನ್ನುತ ಹಾಡಿ
ಕರೆವರು ನಿನ್ನನು ಕರಗಳ ನೀಡಿ ;
ತಮ್ಮ ವದನವನು ಮುಕುರದಲಿ
ನೋಡುತ ನಲಿವರು ಹರುಷದಲಿ.

ಬಾ ಬಾ ಬಾ ಬಾ ಬಾನಿನ ಕನ್ನಡಿ,
ಬಾಲರ ಬಾಯೊಳು ಮೆರೆಯುವ ನಲ್ನುಡಿ—
ಬೀರುತ ಕಿರಣದ ತಂಪನ್ನು,
ಸಾರುತ ಬಾಳಿನ ಇಂಪನ್ನು !

———

ನಮ್ಮ ಮನೆಯ ಕಂದ

ಹರಕು ಮೋಡ ಗಗನಕಂದ
ತೇಪೆ ಹಸುರ ನೆಲವು ಚೆಂದ
ಹರಕು ಬಟ್ಟೆ ತೊಟ್ಟರೇನು
ಚೆಂದ ನಮ್ಮ ಮನೆಯ ಕಂದ.

ಅರಳು ಹೂವು ತೋಟಕಂದ
ಹೊಳೆವ ತಾರೆ ಇರುಳಿಗಂದ
ನಗೆಯ ಮೊಗದ ಹೊಳೆವ ಕಣ್ಣ
ಕಂದ ನಮ್ಮ ಮನೆಗೆ ಚೆಂದ.

ಚಿಗಿವ ನೆಗೆವ ಕರುವೆ ಚೆಂದ
ಉಲಿವ ಹಾರು ಹಕ್ಕಿ ಚೆಂದ
ನಗುತ ನಲಿದು ಮನೆಯಲೆಲ್ಲ
ಹರಿವ ನಮ್ಮ ಕಂದ ಚೆಂದ.

ಎದುರು ಮನೆಯೊಳಿಷ್ಟು ಹೊತ್ತು
ನೆರೆಯ ಮನೆಯೊಳಷ್ಟು ಹೊತ್ತು
ಹೀಗೆ ಬೀದಿಗೆಲ್ಲ ಬೇಕು
ನಮ್ಮ ಮನೆಯ ಕಂದ—ಮುತ್ತು.

——

ಮುತ್ತಿನ ಸರ

ಮುತ್ತು! ಮುತ್ತು!
ಕನ್ನಡ ಮುತ್ತು !

ಎಂತಹ ಮುತ್ತು ?
ಬೆಳ್ಳಗೆ ನುಣ್ಣನೆ ಹೊಳೆಯುವ ಮುತ್ತು.
ಎಂತಹ ಬಿಳುಪು ?
ಮಲ್ಲಿಗೆ ಹೂವಿನ ತಿಳಿ ಬಿಳುಪು.
ಎಂತಹ ನುಣುಪು ?
ಮಾವಿನ ಚಿಗುರಿನ ಮೈನುಣುಪು.
ಎಂತಹ ಹೊಳಪು ?
ನಗುತಿಹ ಕಂದನ ಕಣ್ಣಿನ ಹೊಳಪು.
ಯಾರಾ ಕಂದ ?
ಕನ್ನಡ ಕಂದ.
ಎಂತಹ ಕನ್ನಡ ?
ಮುತ್ತಿನಂತಹ ಸಿರಿಸಿರಿ ಕನ್ನಡ.
ಎಂತಹ ಮುತ್ತು ?
ಕನ್ನಡ ಮುತ್ತು.
ಬೇಕೇ ಮುತ್ತು ?
ಬೇಕೇ ಬೇಕು.
ಏತಕೆ ಮುತ್ತು ?
ಮುತ್ತಿನ ಸರಕೆ.
ಯಾರಿಗೆ ಆ ಸರ ?
ಕನ್ನಡ ತಾಯ್ಗೆ !

ಇಲಿಯ ಬಾಲ

ಒಂದು

ಇಲಿ

ಕೋಣೆ

-ಯಲಿ

ಗೋಡೆ

ಬಳಿ

ಮೂಲೆ ತು.

-ಯಲಿ ಡಿ

ತೋಡಿ ೦

ನೆಲ ಕ

ಮಾಡಿ ಗೆ

ಬಿಲ ಹೀ

ಒ ಲ

ಳ ಬಾ

ಗೆ ರ

ಹೋ ದ

ಗೆ—ಅ

———

ಹಾವು

ಇ
ಲಿ
ಇ
ಲಿ
ೀೀ

ಹಾವು ಹಾವು ಹಾವು
ಹಾಹಾ ! ಹಾವು ಹಾ !
ಹಾ ಹಾ ಹಾ ಹಾ ಹಾ !
ಕಚ್ಚಿದೊಡೆ ಸಾವು !
ಹಾಕು ತಲೆಯ ಮೇಲೆ ಹೂವು.

ಗಂಟೆ



ಣಗಣಗಂಟೆ

ಕಿ
ರೀಟ
ಧ ರಿ ಸು ವ
ದೊರೆಗಳು
ಇಲ್ಲ. ಟೋಪಿ
ಹಾಕುವ ಜನರೆಲ್ಲ.

ಕಿಟ್ಟಿಯ ಪ್ರಶ್ನೆ

ನಾನೂ ಕಿಟ್ಟಿ ಸಂಜೆಯ ಹೊತ್ತು
ಬಯಲೊಳು ತಿರುಗುತ್ತಿರಲಾಗ
ಸೂರ್ಯನ ಬಿಂಬ ಕೆಳಕ್ಕೆ ಬಿತ್ತು
ಕೆಂಪಾಯ್ತಾಕಾಶವು ಬೇಗ

"ಏಕೆ ಆಕಾಶ ಕೆಂಪು, ಅಣ್ಣ?"
ಕಿಟ್ಟಿ ಪ್ರಶ್ನೆಯನು ಕೇಳಿದನು.
ಸೂರ್ಯ ಮುಳುಗಿದರೆ ಕೆಂಬಣ್ಣ
ಕಾಣುವುದೆನ್ನುತ ಹೇಳಿದನು.

"ಎಮ್ಮೇ ಪ್ಯಾಸನು ಮಾಡಿದ್ದೀಯ
ನಿನಗೇನೂ ತಿಳಿಯದು, ಅಣ್ಣ—
ನಮ್ಮ ಮನೆಯನೆಡವುತ ಸೂರ್ಯ
ಬಿದ್ದ, ರಕ್ತ ಹರಿಯುತ್ತಿದೆ, ಅಣ್ಣ."

ನವಿಲು ಮರಿ

ಬಣ್ಣಬಣ್ಣದಾ ನವಿಲುಗರಿ
ಹಾಕಿದೆ ಪುಸ್ತಕದಲ್ಲಿ ಮರಿ!

ಒಂದಿದ್ದುದು ನೂರಾಗಿದೆ, ಅಣ್ಣ,
ಎಲ್ಲಕ್ಕೂ ಇದೆ ಬಗೆಬಗೆ ಬಣ್ಣ!

ಗರಿಗಳೆಲ್ಲವೂ ತೆರೆವುವು ಕಣ್ಣ,
ಆಗ ನೋಡಲವು ಇನ್ನೂ ಚೆನ್ನ

ಬೆಳೆದೂ ಬೆಳೆದೂ ನವಿಲುಗರಿ,
ಕೊನೆಗಾಗುವುದು ನವಿಲುಮರಿ!

ಅಗ್ಗದ ರಾಗಿ

ಸುಗ್ಗಿಯಾಗೆ ನುಗ್ಗಿಹೋಗಿ
ಹಿಗ್ಗಾಮುಗ್ಗಾ ಜುಗ್ಗಿ ಜುಗ್ಗಿ
ಅಗ್ಗದ ಬೆಲೆಗೆ ಮುಗ್ಗಿದ ರಾಗಿ
ಎಗ್ಗ ತಂದ : ಹೆಂಡತಿ ಮೂಗಿ !

ತೋಟದ ಮಾಲಿ

ನಾನೊಬ್ಬ ತೋಟದ ಮಾಲಿ
ನನ್ನ ಹೆಂಡ್ತಿ ಹೆಸರು ಕಾಳಿ.
ಮಾಡೋದು ದೊಡ್ಡೋರ ಕೂಲಿ
ನಮ್ಮ ಹೊಟ್ಟೆ ಖಾಲಿ, ಖಾಲಿ !

ಸಂಪಿಗೆ ಮಲ್ಲಿಗೆ ರೋಜ
ಸೇಬು ದಾಳಿಂಬೆ ಚಕ್ಕೋತ
ಬೆಳೆಯೋ ತನಕ ನಾ ರಾಜ
ಬೆಳೆದಮೇಲೆ ನಮಗೆ ಖೋತ !

ಹಣ್ಣು ಹಂಪಲು ಬೆಳೆದು ದಣಿದು
ಕಷ್ಟಪಟ್ಟು ನೀರುಹುಯ್ದು

ಕಣ್ತುಂಬ ನೋಡ್ನೋಡಿ ತಣಿದು
ದಣಿಗೆ ಒಪ್ಪಿಸ್ಬೇಕು ಕುಯ್ದು.

ನಾನೊಬ್ಬ ತೋಟದ ಮಾಲಿ
ಬೆಳೆಯೋದು ಯಾರ್‍ದೊ ಹೂಹಣ್ಣು
ಸಾಕಾಗ್ದು ಸಿಕ್ಕೋ ಕೂಲಿ
ಹೆಂಡ್ರು ಮಕ್ಕಳ ಬಾಯ್ಗೆ ಮಣ್ಣು !

ಢುಂ ಢುಂ ಡೋಲು !

ಹುಡುಗಿ :

ಜುಟ್ಟು ಹೋಯ್ತು ಕ್ರಾಪು ಬಂತು
ಢುಂ ಢುಂ ಢುಂ
ದಟ್ಟಿ ಹೋಯ್ತು ಪ್ಯಾಂಟು ಬಂತು
ಢುಂ ಢುಂ ಢುಂ.

ಹುಡುಗ :

ಅರಿಸಿನ ಹೋಯ್ತು ಪೌಡರ್ ಬಂತು
ಢುಂ ಢುಂ ಢುಂ
ಕರಿಮಣಿ ಹೋಯ್ತು ನೆಕ್ಲೆಸ್ ಬಂತು
ಢುಂ ಢುಂ ಢುಂ.

ಹುಡುಗಿ :

ಚೆಂಡು ಬಿತ್ತು ಕ್ರಿಕೆಟ್ ಎತ್ತು
ಢುಂ ಢುಂ ಢುಂ
ಗಂಡುತಲೆಗೆ ಬೈತಲೆ ಬಂತು
ಢುಂ ಢುಂ ಢುಂ.

ಹುಡುಗ :

ಒಂಟಿ ಜಡೆ ಡಬ್ಬಲ್ ಜಡೆ
ಆಯ್ತು ಢುಂ ಢುಂ
ಸೆಂಟು ಲಿಪ್‌ಸ್ಟಿಕ್ ಅಂಟಿಕೊಂಡುವು
ಢುಂ ಢುಂ ಢುಂ.

ಇಬ್ಬರೂ ಒಟ್ಟಿಗೆ :

ಸ್ಲೇಟ್ ಹೋಯ್ತು ನೋಟ್‌ಬುಕ್ ಬಂತು
ಢುಂ ಢುಂ ಢುಂ
ಬಳಪ ಹೋಯ್ತು ಪೆನ್ನು ಬಂತು
ಢುಂ ಢುಂ ಢುಂ.

ಕಾಸು ಹೋಯ್ತು ಪೈಸ ಬಂತು
ಢುಂ ಢುಂ ಢುಂ
ಇಂಗ್ಲಿಷ್ ಹೋಯ್ತು ಹಿಂದಿ ಬಂತು
ಢುಂ ಢುಂ ಢುಂ.

ಜಾಣಮಕ್ಕಳು

"ನಿಂ ತಂದೆಗೆ ಸಂಬಳ ಎಷ್ಟು?"
"ನಂಗೊತ್ತಿಲ್ಲಾರೀ."

"ನಿಂ ಅಣ್ಣಂಗೆ ಪ್ಯಾಸಾಯ್ತೇನೋ"
"ನಂಗೊತ್ತಿಲ್ಲಾರೀ."

"ನಿಂ ಅಕ್ಕಂಗೆ ಗಂಡ್ ಗೊತ್ತಾಯ್ತು?"
"ನಂಗೊತ್ತಿಲ್ಲಾರೀ."

"ನಿನ್ ಲಂಗಕ್ಕೆ ಏನ್ ಕೊಟ್ರಮ್ಮ ?"
"ನಂಗೊತ್ತಿಲ್ಲಾರೀ."

"ನಿಂ ಮನೆಗೆ ಬಾಡಿಗೆ ಎಷ್ಟು ?"
"ನಂಗೊತ್ತಿಲ್ಲಾರೀ."

"ಕಾಶೀಗ್ಹೋದ್ರೇನೋ ನಿಂ ತಾತ ?"
"ನಂಗೊತ್ತಿಲ್ಲಾರೀ."

"ಯಾವಾಗ್ ಸಿಕ್ತಾರೆ ನಿಂ ತಂದೆ ?"
"ನಂಗೊತ್ತಿಲ್ಲಾರೀ."

"ನಿಂ ತಾಯೆಲ್ಲಿ, ಮನೇಲಿಲ್ವೆ ?"
"ನಂಗೊತ್ತಿಲ್ಲಾರೀ."

"ಮಕ್ಕಳು ಅಂದ್ರೆ ಹೀಗಿರಬೇಕು :
ತುಂಬ ಜಾಣರು ನೀವು.

ನಾನು ಯಾರು ಗೊತ್ತು ತಾನೆ ?"
"ನಂಗೊತ್ತಿಲ್ಲಾರೀ,"
"ನಂಗೊತ್ತಿಲ್ಲಾರೀ."

——

ಜೀವಮಾನ

ಒಂದರಿಂದ ಹತ್ತು
ಪೆಪ್ಪರ್‌ಮೆಂಟ್ ಜಗತ್ತು.

ಹತ್ತರಿಂದ ಇಪ್ಪತ್ತು
ಯೌವನದ ಮತ್ತು.

ಇಪ್ಪತ್ತು ಮೂವತ್ತು
ಬಾಳ್ವೆ ಬಹಳ ಗತ್ತು.

ಮೂವತ್ತು ನಲವತ್ತು
ನಲಿವು ನೋವಿಗೆ ತುತ್ತು.

ನಲವತ್ತು ಐವತ್ತು
ಕೊರಳಿಗೆ ಬಾಳು ಸುತ್ತು.

ಐವತ್ತು ಅರುವತ್ತು
ದೈವದ ಕಡೆಗೆ ಕತ್ತು

ಅರುವತ್ತು ಎಪ್ಪತ್ತು
ಬದುಕಿಹ ಸತ್ತು ಸತ್ತು.

ಎಪ್ಪತ್ತು ಎಂಬತ್ತು.
ಸಾವುದೇ ಸುಖಸಂಪತ್ತು.

ಎಂಬತ್ತು ತೊಂಬತ್ತು
ಬುದುಕಿರೆ ಬಾಳೇ ಮಿತ್ತು.

ತೊಂಬತ್ತು ನೂರು
ಬದುಕಿಹರಾರು ?

ಕೊಲ್ಲದ ಕಾಳೆಗ

ಬನ್ನಿರಿ ಬಾಲರೆ ನಡೆಯಿರಿ ಗೆಳೆಯರೆ
ನಾಡಿನ ಬಿಡುಗಡೆ ಕಾಳೆಗಕೆ
ತನ್ನಿರಿ ನಿಮ್ಮ ಕಪ್ಪ ಕಾಣಿಕೆಯ
ಭಾರತಮಾತೆಯ ಓಲಗಕೆ!

ಸತ್ಯದ ಕುದುರೆಯನೆಲ್ಲರು ಹತ್ತಿ
ಹಿಡಿದು ಝಳಪಿಸಿರಿ ಅಹಿಂಸೆ ಕತ್ತಿ
ತಿರುಗಿಸಿ ಗಿರ್ರನೆ ನೂಲುವ ಚರಕ
ಹುಟ್ಟಡಗಲಿ ದಾರಿದ್ರ್ಯದ ನರಕ.

ಹಿಂದೂ ಮುಸ್ಲಿಮ ಸಿಕ್ಕ ಪಾರಸಿಕ
ಜೈನ ಬೌದ್ಧ ಈಸಾಯಿ ಯೆಹೂದ್ಯ
ಉಚ್ಚ ನೀಚ ಕುಲ ಸ್ಪೃಶ್ಯಾಸ್ಪೃಶ್ಯ
ಎಂಬೀ ಭೇದಗಳನು ಮರೆತು
ಒಂದೇ ಮನದಲಿ ನುಗ್ಗಿರಿ ಮುಂದಕೆ
ದ್ವೇಷ ಭಾವನೆಯು ತೊರೆದು !

ವೈರಿಗಳೆಲ್ಲರು ಮಿತ್ರರೆ ಅಂದು
ಅವರೆಲ್ಲರ ರಣರಂಗದಿ ಕೊಂದು
ಪಾಪವ ಗೈಯುವ ಉದ್ಯೋಗ
ಇಲ್ಲ : ನಮ್ಮದಾತ್ಮತ್ಯಾಗ.

ಮೂಡಿದಂದು ಸ್ವಾತಂತ್ರ್ಯದ ಸೂರ್ಯ
ಮುಗಿವುದು ನಮ್ಮ ಯುದ್ಧ ಕಾರ್ಯ ;
ಆದಕಾಗಿಯೆ ನಾವ್ ದುಡಿಯೋಣ,
ಅವಶ್ಯಬಿದ್ದರೆ ಮಡಿಯೋಣ !

ಹೂವಾಡಿಗಿತ್ತಿ—ರಾಘವ

ಮಕ್ಕಳಿಗಾಗಿ ರಚಿತವಾಗಿರುವ ಈ ಕವನ ಸಂಗ್ರಹದಲ್ಲಿ ಮಕ್ಕಳಿಗೆ ಬಲು ಪ್ರಿಯವಾದ 'ಹೂವಾಡಿಗಿತ್ತಿ', 'ಮೊಸರ್ಬೇಕ್ ಮೊಸರು', 'ಇರುವೆ', 'ತುಂಟರು', 'ಕಳ್ಳಸಿದ್ದ', 'ಪಟಿಂಗ ರಂಗ', 'ನಂ ಚಿಕ್ಕ', 'ಢುಂ ಢುಂ ಡೋಲು!' 'ಜಾಣ ಮಕ್ಕಳು' ಮೊದಲಾದ 27 ಕವನಗಳಿವೆ. ಈ ಪುಸ್ತಕಕ್ಕೆ ಚಿತ್ರ ಬರೆದಿರುವವರು ಸುಪ್ರಸಿದ್ಧ ಚಿತ್ರಕಾರರಾದ ಆರ್. ಕೆ. ಲಕ್ಷ್ಮಣ್ ಅವರು.

ಅಭಿಪ್ರಾಯಗಳು :

Mr. M. V. Seetharamayya who writes under the pseudonym Raghava, has given the Kannada Child many a blithe song already. His Poems have now been brought together in this diminutive volume, whose prettiness should surely attract young folk.

—*The Indian Express.*

ಈ ಸಂಗ್ರಹದಲ್ಲಿ...ಪುಟ್ಟ ಪದ್ಯಗಳಿವೆ. ಅವುಗಳಲ್ಲಿ ಮೊದಲನೆಯ ಹಾಡಾದ 'ಹೂವಾಡಿಗಿತ್ತಿ'....ಈ ಪದ್ಯದ ಒಂದೊಂದು ಸಾಲೂ ಹಾಲಿನಲ್ಲಿ ನೆನಸಿದ ಹೋಳಿಗೆಯಂತೆ ಆಕರ್ಷಕವಾಗಿದೆ; 'ನಮ್ಮ ಮನೆಯ ಕಂದ' ಎಂಬುದೂ ಹಿತವಾಗಿದೆ.

ಕೆ. ಎಸ್. ನರಸಿಂಹಸ್ವಾಮಿ

The Poems written in simple language, are well calculated to capture the interest of little folks and are capable of being memorised easily.

—*The Hindu*

ಕ್ರಾ. ಅ. 32 ಪುಟಗಳು, 2 ಚಿತ್ರಗಳು, ಮೂರನೆಯ ಮುದ್ರಣ

ಇದೇ ಲೇಖಕರ ಇನ್ನೊಂದು ಮಕ್ಕಳ ಕವಿತೆಗಳ ಸಂಗ್ರಹ :

ಹಾವಾಡಿಗ

ಕಾವ್ಯಾಲಯ : : ಪ್ರಕಾಶಕರು : : ಮೈಸೂರು